<u>ಸಾಕ್ಷಿಯನ್ನು ದಿಃ 12.12.2022 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ 3 ರಿಂದ 6 ನೇ ಪ್ರತಿವಾದಿ ಪರವಾಗಿ ಶ್ರೀ ಜೆ.ಪಿ ವಕೀಲರಿಂದಃ</u>

ನನ್ನ ತಂದೆ ಹೆಸರನ್ನು ಚಿಕ್ಕತಿಮ್ಮರಾಯಪ್ಪ ಮತ್ತು ಪಿಡೆತಪ್ಪ ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಾತನನ್ನು ರಾಮಪ್ಪ ಅಲಿಯಾಸ್ ಚಿಕ್ಕರಾಮಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ. ನನ್ನ ಅಜ್ಜಿಯ ಹೆಸರು ಗೋವಿಂದಮ್ಮ ಎಂದರೆ ಸರಿ. ನನ್ನ ಅಜ್ಜನಿಗೆ ನನ್ನ ತಂದೆ ಚಿಕ್ಕತಿಮ್ಮರಾಯಪ್ಪ ಮತ್ತು ಚಿನ್ನಕುಚ್ಚಪ್ಪ ಎಂದು ಇಬ್ಬರು ಗಂಡು ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಒಬ್ಬನೇ ಮಗ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆಗೆ ನಾನು ಮತ್ತು ನನ್ನ ಸಹೋದರ ಮುನಿವೆಂಕಟಪ್ಪ ಇಬ್ಬರು ಮಕ್ಕಳು ಇರುತ್ತೇವೆ. ನನ್ನ ಸಹೋದರ ಮುನಿವೆಂಕಟಪ್ಪ ಮೃತಪಟ್ಟಿರುತ್ತಾರೆ. ನನ್ನ ಸಹೋದರನ ಹೆಂಡತಿ ರಾಜಮ್ಮ, ಮಕ್ಕಳು ವರಲಕ್ಷ್ಮಿ , ಮಂಜು, ಆದಿಲಕ್ಷ್ಮಿ ಈಗ ಇರುತ್ತಾರೆ.

ಚಿನ್ನ ಕುಚ್ಚಪ್ಪ ಎಂಬುವವರು ನಮ್ಮಗ್ರಾಮದಲ್ಲಿ ವಾಸ ಇದ್ದ ಬಗ್ಗೆ ಗೊತ್ತಿಲ್ಲ. ನಮ್ಮ ಗ್ರಾಮದಲ್ಲಿ ಮುನಿಸಾಮಿ ಮತ್ತು ಗೋಪಾಲಪ್ಪ ಎಂಬ ಹೆಸರಿನವರು ಯಾರು ಇರುವುದಿಲ್ಲ. ಮುನಿಸಾಮಿ ಮತ್ತು ಗೋಪಾಲಪ್ಪರವರು ಚಿನ್ನಕುಚ್ಚಪ್ಪರವರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಚಿನ್ನಕುಚ್ಚಪ್ಪರವರ ಮಗ 1 ನೇ ಪ್ರತಿವಾದಿ ಮುನಿಸಾಮಿರವರು ಈಗ್ಗೆ 2 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸಲ್ಲಿಸುವ ಕಾಲಕ್ಕೆ 1 ನೇ ಪ್ರತಿವಾದಿಯು ಚಿನ್ನಕುಚ್ಚಪ್ಪರವರ ಮಗ ಎಂದು ಹೇಳಿ ಬರೆಸಿರುವುದಿಲ್ಲ. ಅದೇ ರೀತಿ ಗೋಪಾಲಪ್ಪರವರ ಹೆಸರನ್ನು ಸಹ ಬರೆಸಿರುವುದಿಲ್ಲ. ಪ್ರತಿವಾದಿ 1 ರಿಂದ 8 ರವರ ವಿರುದ್ಧ ಈ ದಾವೆ ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿ ಮುನಿಸಾಮಿರವರು ಯಾರ ಮಗ

ಎಂದು ನನಗೆ ಗೊತ್ತಿಲ್ಲ. 2 ನೇ ಗೋಪಾಲಪ್ಪರವರು ಯಾರ ಮಗ ಎಂದು ನನಗೆ ಗೊತ್ತಿಲ್ಲ.

ನಮ್ಮ ಗ್ರಾಮದಲ್ಲಿ ಚಿಕ್ಕವರದಪ್ಪ ಮತ್ತು ಅವರ ಹೆಂಡತಿ ಮುದ್ದಮ್ಮರವರು ವಾಸ ಇದ್ದರು. ಸದರಿ ಚಿಕ್ಕವರದಪ್ಪರವರಿಗೆ ದೊಡ್ಡ ತಿಮ್ಮರಾಯಪ್ಪ, ಚಿಕ್ಕತಿಮ್ಮರಾಯಪ್ಪ ಮತ್ತು ಯರಪ್ಪ ಎಂಬ ಮಕ್ಕಳು ಇದ್ದರು ಎಂದರೆ ಸರಿ. ಅವರ ಕುಟುಂಬಕ್ಕೂ ಮತ್ತು ನಮ್ಮ ಕುಟುಂಬಕ್ಕೂ ಸಂಬಂಧ ಇಲ್ಲ. ದೊಡ್ಡತಿಮ್ಮರಾಯಪ್ಪ, ಚಿಕ್ಕತಿಮ್ಮರಾಯಪ್ಪ ಮತ್ತು ಯರಪ್ಪರವರುಗಳು ಮೃತಪಟ್ಟಿರುತ್ತಾರೆ ಎಂದರೆ ಸರಿ. ಯರಪ್ಪರವರು ವಿವಾಹವಾಗದೆ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದೊಡ್ಡ ತಿಮ್ಮರಾಯಪ್ಪ ರವರಿಗೆ ವೆಂಕಟೇಶಪ್ಪ, ವೆಂಕಟಪ್ಪ, ಸೀನಪ್ಪ ಮತ್ತು ನಾಗರಾಜು ಎಂಬ ನಾಲ್ಕು ಜನ ಮಕ್ಕಳು ಎಂದರೆ ಸರಿ. ಈ ಪ್ರಕರಣದ 3 ನೇ ಪ್ರತಿವಾದಿ ನಾಗರಾಜುರವರು ಮೇಲ್ಕಂಡ ದೊಡ್ಡ ತಿಮ್ಮರಾಯಪ್ಪರವರ ಮಗ ಎಂದರೆ ಸರಿ. ಮೇಲ್ಕಂಡ ಚಿಕ್ಕತಿಮ್ಮರಾಯಪ್ಪರವರಿಗೆ ಮೂರು ಜನ ಮಕ್ಕಳು ಮುನಿಸಾಮಿ, ವರದಪ್ಪ ಮತ್ತು ರಾಮಕೃಷ್ಣಪ್ಪ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರಲ್ಲಿ ಮುನಿಸಾಮಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುನಿಸಾಮಿಗೆ ಹನುಮಕ್ಕ ಮತ್ತು ಸುಬ್ಬಮ್ಮ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. 1 ನೇ ಹೆಂಡತಿ ಹನುಮಕ್ಕರವರಿಂದ ಒಬ್ಬ ಮಗ ವೆಂಕಟೇಶ್, 2 ನೇ ಹೆಂಡತಿ ಸುಬ್ಬಮ್ಮರವರಿಂದ ಉಮಾ, ಕಲಾ ಮತ್ತು ದೀಪ ಮೂರು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

<u>ಮುಂದುವರೆದ ಪಾಟೀ ಸವಾಲುಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**
(ಕೇಶವಮೂರ್ತಿ.ಬಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಬಂಗಾರಪೇಟೆ